## ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

# ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಹೊರಗುತ್ತಿಗೆ ಟೆಂಡರ್ ಷೆಡ್ಯೂಲ್

ಟೆಂಡರ್ ನಮೂನೆ

# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

## -: ಪರಿವಿಡಿ :-

ಭಾಗ –1 : ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರು ಪದ್ಧತಿಯಲ್ಲಿ)

ಅನುಬಂಧ–1 : ಟೆಂಡರ್ ಅವಧಿ.

ಭಾಗ–2 : ಗ್ರೂಪ್–ಸಿ ವೃಂದದ ಶೀಘ್ರಲಿಪಿಗಾರರ ಸೇವೆಗಳನ್ನು ಒದಗಿಸುವ ಬಗ್ಗೆ ಅರ್ಜಿ, ಮಾಹಿತಿ ಹಾಗೂ ದಾಖಲಾತಿಗಳ ವಿವರ.

ಅನುಬಂಧ–1 : ತಾಂತ್ರಿಕ ಬಿಡ್ ನಮೂನೆ ಮತ್ತು ಚೆಕ್ ಲಿಸ್ಟ್.

ಅನುಬಂಧ–2 : ಇ.ಎಂ.ಡಿ. ಮತ್ತು ಸೆಕ್ಯೂರಿಟಿ ಡಿಪಾಜಿಟ್ ವಿವರ

ಅನುಬಂಧ–3 : ಏಜೆನ್ಸಿಯವರು ಒದಗಿಸಬೇಕಾಗಿರುವ ಸೇವೆಗಳ ಸಂಕ್ಷಿಪ್ತ ವಿವರ

ಅನುಬಂಧ–4 : ಸಿಬ್ಬಂದಿ ಒದಗಿಸುವ ಏಜೆನ್ಸಿಯವರಿಗೆ ವಿಧಿಸಿರುವ ಷರತ್ತು–ವ–ನಿಬಂಧನೆಗಳು

ಅನುಬಂಧ–5 : ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಟೆಂಡರ್ ಸಲ್ಲಿಸಲು ಪಾಲಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು

ಅನುಬಂಧ–6 : ಟೆಂಡರ್ ತೆರೆಯುವುದು ಮತ್ತು ಟೆಂಡರ್‌ಗಳ ಮೌಲ್ಯಮಾಪನ

ಅನುಬಂಧ–7 : ಆರ್ಥಿಕ ಬಿಡ್ ನಮೂನೆ.

ಸೂಚನೆ: ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸುವ ಮೊದಲು ಪರಿವಿಡಿಯಲ್ಲಿನ ಎಲ್ಲಾ ಸೂಚನೆ ಷರತ್ತು–ವ–ನಿಬಂಧನೆಗಳನ್ನು ಹಾಗೂ ವಿಧಿ ವಿಧಾನಗಳನ್ನು ಸೂಕ್ಷ್ಮವಾಗಿ ಪರಿವೀಕ್ಷಿಸಿ ಟೆಂಡರ್ ಸಲ್ಲಿಸತಕ್ಕದ್ದು.

ಉಪ ನಿಬಂಧಕರು (ಆಡಳಿತ–2),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಲೋ/ಸಿಬ್ಬಂದಿ-1/29/2019-20(ಉ.ಕ) ದಿನಾಂಕ:27/07/2021.

## ಭಾಗ-1

## "ಇ-ಟೆಂಡರ್ ಪ್ರಕಟಣೆ"

ಕರ್ನಾಟಕ ಲೋಕಾಯುಕ್ತ ಪ್ರಧಾನ ಕಛೇರಿ, ಬೆಂಗಳೂರು ಇಲ್ಲಿ, ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಶೀಘ್ರಲಿಪಿಗಾರರು, ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಅರ್ಹ ನೋಂದಾಯಿತ ಏಜೆನ್ಸಿಗಳಿಂದ, ಸ್ಪರ್ಧಾತ್ಮಕ ಸೇವಾ ಶುಲ್ಕದ ದರಪಟ್ಟಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಈ ಪ್ರಕಟಣೆಯನ್ವಯ ಹೊರಗುತ್ತಿಗೆ ಮೂಲಕ ಪಡೆಯಲು ಉದ್ದೇಶಿಸಿರುವ ಗ್ರೂಪ್-ಸಿ ಮಾನವ ಸಂಪನ್ಮೂಲ ಸೇವೆಗಳ ಸಂಖ್ಯೆಯು ಸರ್ಕಾರದ ಮಂಜೂರಾತಿ ಮತ್ತು ಸರ್ಕಾರವು ಅನುಮತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

| | | |
|---|---|---|
| 1. | ಟೆಂಡರ್ ಆಹ್ವಾನಿಸುವ ಪ್ರಾಧಿಕಾರ | ಉಪ ನಿಬಂಧಕರು (ಆಡಳಿತ-2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು. |
| 2. | ಟೆಂಡರ್ ತೆರೆಯುವ ಪ್ರಾಧಿಕಾರ | ಉಪ ನಿಬಂಧಕರು (ಆಡಳಿತ-1), ಕರ್ನಾಟಕ ಲೋಕಾಯುಕ್ತ, ಬೆಂಗಳೂರು. |
| 3. | ಟೆಂಡರ್ ಅಂಗೀಕರಿಸುವ ಪ್ರಾಧಿಕಾರ | ಉಪ ನಿಬಂಧಕರು (ಆಡಳಿತ-1), ಕರ್ನಾಟಕ ಲೋಕಾಯುಕ್ತ, ಬೆಂಗಳೂರು. |
| 4. | ಟೆಂಡರ್ ಮೇಲ್ಮನವಿ ಪ್ರಾಧಿಕಾರ | ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. |
| 5. | **ಟೆಂಡರ್ ಪ್ರಕಟಣೆ ದಿನಾಂಕ** | 28/07/2021 |
| 6. | **ಟೆಂಡರ್ ಪೂರ್ವಭಾವಿ ಸಭೆ** | ದಿನಾಂಕ:25/08/2021<br>ಸಮಯ: ಸಂಜೆ 04:00 ಗಂಟೆಗೆ |
| 7. | **ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ** | ದಿನಾಂಕ:31/08/2021<br>ಸಮಯ: ಸಂಜೆ 04:00 ಗಂಟೆವರೆಗೆ |
| 8. | **ತಾಂತ್ರಿಕ ಬಿಡ್ ತೆರೆಯುವ ದಿನಾಂಕ** | ದಿನಾಂಕ:02/09/2021<br>ಸಮಯ: ಬೆಳಗ್ಗೆ 11:00 ಗಂಟೆಗೆ |
| 9. | **ಆರ್ಥಿಕ ಬಿಡ್ ತೆರೆಯುವ ದಿನಾಂಕ** | ದಿನಾಂಕ:15/09/2021<br>ಸಮಯ: ಬೆಳಗ್ಗೆ 11:00 ಗಂಟೆಗೆ |

ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ ಮಾಹಿತಿಗಾಗಿ *CEG (Government of Karnataka)* 080-25501216/25501227 ಅಥವಾ ***www.eproc.karnataka.gov.in*** ಮತ್ತು ಇನ್ನೂ ಹೆಚ್ಚಿನ ವಿವರಗಳಿಗಾಗಿ ಉಪ ನಿಬಂಧಕರು (ಆಡಳಿತ-2), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಕಛೇರಿಯಲ್ಲಿ ದಿನಾಂಕ:24/08/2021ರ ಪೂರ್ವಾಹ್ನ 11-00 ರಿಂದ 01-00 ಗಂಟೆಯೊಳಗೆ ಖುದ್ದಾಗಿ ಸಂಪರ್ಕಿಸಿ ಮಾಹಿತಿ ಪಡೆಯುವುದು. ದೂರವಾಣಿ ಸಂಖ್ಯೆ.080-22257013-ಎಕ್ಸಟೆನ್ಸ್‌ನ್-270.

ಉಪ ನಿಬಂಧಕರು (ಆಡಳಿತ-2),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ಭಾಗ-1

# ಅನುಬಂಧ-1

# ಟೆಂಡರ್ ಅವಧಿ

(1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 59 ಸೇಲೋಯು 2019 ದಿನಾಂಕ:12/11/2020 ಮತ್ತು ಸೇರ್ಪಡೆ ಆದೇಶ ದಿನಾಂಕ:15/03/2021ರಲ್ಲಿ ಶೀಘ್ರಲಿಪಿಗಾರರ ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ಅನುಮತಿ ನೀಡಿರುತ್ತದೆ.

(2) ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆಗಳನ್ನು ಪಡೆದುಕೊಳ್ಳಲು ಸರ್ಕಾರವು ನಿಗದಿಪಡಿಸಿದ ಕಾಲಾವಧಿಯವರೆಗೆ ಮತ್ತು ಸದರಿ ಕಾಲಾವಧಿಯನ್ನು ಮುಂದುವರಿಸಿದಲ್ಲಿ, ಅಲ್ಲಿಯವರೆಗೆ ಅಥವಾ ಈ ಸಂಸ್ಥೆಯ ಇಲಾಖಾ ಮುಖ್ಯಸ್ಥರಾದ ನಿಬಂಧಕರು ತೀರ್ಮಾನಿಸುವವರೆಗೆ ಈ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್‌ದಾರರಿಗೆ ನೀಡುವ ಕಾರ್ಯಾದೇಶ ಜಾರಿಯಲ್ಲಿರುತ್ತದೆ.

(3) ಸರ್ಕಾರವು ಹಂತ ಹಂತವಾಗಿ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರ ಮಾನವ ಸಂಪನ್ಮೂಲ ಸೇವೆಯನ್ನು ಪಡೆದುಕೊಳ್ಳಲು ಅನುಮತಿ ನೀಡಿ, ಕಾಲಾವಧಿಯನ್ನು ವಿಸ್ತರಿಸಿದಲ್ಲಿ ಅಥವಾ ಹೊರಗುತ್ತಿಗೆ ಆಧಾರದಲ್ಲಿ ಪಡೆಯಬಹುದಾದ ಶೀಘ್ರಲಿಪಿಗಾರರ ಸಂಖ್ಯೆಯನ್ನು ಹೆಚ್ಚಿಸಿದಲ್ಲಿ, ಇದೇ ಟೆಂಡರ್ ಮೂಲಕ ಹೆಚ್ಚುವರಿ ಸಂಖ್ಯೆಯ ಸದರಿ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆದುಕೊಳ್ಳಲಾಗುವುದು.

(4) ಏಜೆನ್ಸಿಯವರ ಅಥವಾ ಅವರು ಒದಗಿಸಿದ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ವ್ಯಕ್ತಿಯ ಸೇವೆಯು ತೃಪ್ತಿಕರವಾಗಿಲ್ಲವಾದಲ್ಲಿ ಯಾವುದೇ ನೋಟೀಸ್ ನೀಡದೆ ಅವರ ಸೇವೆಯನ್ನು ಸ್ಥಗಿತಗೊಳಿಸುವ / ಕರಾರನ್ನು ರದ್ದುಗೊಳಿಸುವ ಅಧಿಕಾರವನ್ನು ಈ ಸಂಸ್ಥೆಯ ಇಲಾಖಾ ಮುಖ್ಯಸ್ಥರಾದ ನಿಬಂಧಕರು ಹೊಂದಿರುತ್ತಾರೆ.

(5) **ಈ ಟೆಂಡರ್ ಪ್ರಕಟಣೆಯನ್ವಯ ಹೊರಗುತ್ತಿಗೆ ಮೂಲಕ ಪಡೆಯಲು ಉದ್ದೇಶಿಸಿರುವ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆಗಳ ಸಂಖ್ಯೆಯು ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲ ಸೇವೆಗಳನ್ನು ಪಡೆಯಲು ಸರ್ಕಾರದ ಮಂಜೂರಾತಿ ಮತ್ತು ಸರ್ಕಾರವು ಅನುಮತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.**

## PART-2
## ANNEXURE-1
## TECHNICAL BID FORMAT & CHECK LIST

Format for providing the services of **Group-C** Employees to attend the daily duties in the Head Office of Karnataka Lokayukta.

| | | |
|---|---|---|
| 1 | Name/Address of Agency (with e-mail ID, Phone No. / Mobile No.) | |
| 2 | Name of the owner of Agency | |
| 3 | Permanent Address | |
| 4 | Address for Contact | |
| 5 | Details of E.S.I. Registration (Up-load copy of the registered certificate) | |
| 6 | Details of P.F Registration (Up-load copy of the registered certificate) | |
| 7 | Details of Service Tax Registration/G.S.T. (Up-load copy of the registered certificate) | |
| 8 | Registered Certificate of Professional Tax in State Commercial Tax Department (Up-load) | |
| 9 | PAN Number provided by Income Tax Department - Up-load copy of PAN Card & details of latest I.T Returns submitted to Income Tax Department | |
| 10 | Licence taken from Labor Department under provisions of Shops and Commercial Establishment Act should be up-loaded. | |
| 11 | Trade Licence taken from Local Authority should be up-loaded | |
| 12 | Details of Payment of E.M.D. | |
| 13 | Certificate secured from the concerned Authorities for having maintained such two contracts satisfactorily. | |
| 14 | TAN Number (Up-load copy of the TAN Number) | |
| 15 | Self Declaration for not being an elected person | |
| 16 | Self Declaration that, the bidding company/Firm not black listed and not subjected to any penalty | |

## DECLARATION

I ........................................................ hereby declare that the details cited from Sl No-1 to 16 above are true to my knowledge. In case of finding the information furnished as false, my application may be rejected.

Place:
Date: Name & Address of Owner of Agency

# ಭಾಗ-2

## ಅನುಬಂಧ-2

### ಇ.ಎಂ.ಡಿ. ಮತ್ತು ಸೆಕ್ಯೂರಿಟಿ ಡಿಪಾಜಿಟ್ ವಿವರ

ಟೆಂಡರ್‌ನಲ್ಲಿ ಭಾಗವಹಿಸುವ ಏಜೆನ್ಸಿಗಳು ಇ.ಎಂ.ಡಿ. ₹25,000/- ಗಳನ್ನು ಹಾಗೂ ಟೆಂಡರ್ ಪ್ರೋಸೀಜರ್ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ತಿಳಿಸಿರುವ ವಿಧಾನದ ಮೂಲಕ ಪಾವತಿಸಿರಬೇಕು. ಇ.ಎಂ.ಡಿ. ಹಣ ಪಾವತಿಸದ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

1) ಅರ್ಹತೆ ಹೊಂದಿಲ್ಲದ ಏಜೆನ್ಸಿಗಳ ಇ.ಎಂ.ಡಿ. ಹಣವನ್ನು ಅರ್ಹತೆ ಹೊಂದಿದ ಟೆಂಡರ್‌ನ್ನು ನಿಶ್ಚಯಪಡಿಸಿದ ನಂತರ ಬಡ್ಡಿ ರಹಿತವಾಗಿ ನಿಯಮಾನುಸಾರ ಪಾವತಿಸಲಾಗುವುದು.

2) ಯಶಸ್ವೀ ಟೆಂಡರ್‌ದಾರರು ಕಾರ್ಯಾದೇಶ ಪಡೆದ 15 ದಿನಗಳ ಒಳಗಾಗಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ಹೆಸರಿಗೆ **ರೂ.50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳ ಕಾರ್ಯಾಧಾರಿತ ಭದ್ರತೆ (Performance Security) ಬ್ಯಾಂಕ್ ಗ್ಯಾರಂಟಿ ಒದಗಿಸಬೇಕಾಗುವುದು. ಈ ಸಂಸ್ಥೆಯು ಪಡೆಯಲು ಇಚ್ಛಿಸುವ ಮಾನವ ಸಂಪನ್ಮೂಲ ಸೇವೆಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಒದಗಿಸಲು ಆದೇಶಿಸುವ ಅಧಿಕಾರವನ್ನು ಈ ಸಂಸ್ಥೆಯ ಇಲಾಖಾ ಮುಖ್ಯಸ್ಥರಾದ ನಿಬಂಧಕರು ಕಾಯ್ದಿರಿಸಿರುತ್ತಾರೆ.

# ಭಾಗ–2

## ಅನುಬಂಧ–3

**ಏಜೆನ್ಸಿಯವರು ಕರ್ನಾಟಕ ಲೋಕಾಯುಕ್ತ ಪ್ರಧಾನ ಕಛೇರಿ ಬೆಂಗಳೂರಿಗೆ ಗ್ರೂಪ್–ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಕುರಿತು**

(1) ಗ್ರೂಪ್–ಸಿ–ವೃಂದದ– ಶೀಘ್ರಲಿಪಿಗಾರರು

**(ಅ) ಶೀಘ್ರಲಿಪಿಗಾರರ ಸೇವೆಗೆ ಅರ್ಹತೆಗಳು:**

(i) ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

(ii) ಕೆ.ಎಸ್.ಇ.ಇ.ಬಿ. ರವರು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಹಿರಿಯ ಬೆರಳಚ್ಚು ಅಥವಾ ತತ್ಸಮಾನ ಪರೀಕ್ಷೆ ಪಾಸು ಮಾಡಿರಬೇಕು.

(iii) ಕೆ.ಎಸ್.ಇ.ಇ.ಬಿ. ರವರು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಹಿರಿಯ ಶೀಘ್ರಲಿಪಿ ಅಥವಾ ತತ್ಸಮಾನ ಪರೀಕ್ಷೆ ಪಾಸು ಮಾಡಿರಬೇಕು.

(iv) ಗಣಕಯಂತ್ರದಲ್ಲಿ ಕಾರ್ಯನಿರ್ವಹಿಸುವ ಪರಿಣತಿ ಹೊಂದಿರಬೇಕು.

**ವಿಶೇಷ ಸೂಚನೆಗಳು**

(i) ವಯೋಮಿತಿ ಕನಿಷ್ಠ 18 ವರ್ಷಗಳು.

(ii) ಹೆಚ್ಚಿನ ವಿದ್ಯಾರ್ಹತೆ, ವಿಶೇಷ ಕೌಶಲ್ಯತೆ ಇರುವವರಿಗೆ ಪ್ರಾಧಾನ್ಯತೆ ಇರಬೇಕು.

(iii) ಮಹಿಳೆಯವರಿಗೆ ಮತ್ತು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಅರ್ಹತೆ ಆಧಾರದಲ್ಲಿ ಪ್ರಾಧಾನ್ಯತೆ ಇರಬೇಕು & ಆರೋಗ್ಯವಾಗಿ ದೃಢಕಾಯರಾಗಿರಬೇಕು.

(v) ಅಭ್ಯರ್ಥಿಯು ಯಾವುದೇ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾದ / ಶಿಕ್ಷೆಗೊಳಗಾದ ಹಿನ್ನೆಲೆ ಇರಬಾರದು. ಉತ್ತಮ ನಡತೆ ಹೊಂದಿರಬೇಕು.

## ಭಾಗ-2

## ಅನುಬಂಧ-4

### ಏಜೆನ್ಸಿಯವರಿಗೆ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳು

1) ಮಾನವ ಸಂಪನ್ಮೂಲ ಸರಬರಾಜು ಮಾಡುವ ಏಜೆನ್ಸಿಯು ಕಾರ್ಮಿಕ ಇಲಾಖೆ, ಸೇವಾ ತೆರಿಗೆ / ಜಿ.ಎಸ್.ಟಿ., ವೃತ್ತಿ ತೆರಿಗೆ, ಪಿ.ಎಫ್. ಹಾಗೂ ಇ.ಎಸ್.ಐ. ಇಲಾಖೆಯಲ್ಲಿ ನೋಂದಾಯಿಸಿಕೊಂಡಿರತಕ್ಕದ್ದು.

2) ಸರ್ಕಾರದಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಶೀಘ್ರಲಿಪಿಗಾರರು ವೃಂದದ ನೌಕರರ **ಮೂಲ ವೇತನ ರೂ.27,650/-** ಆಗಿದ್ದು ಇ-ಟೆಂಡರ್ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಪ್ರತಿ ಶೀಘ್ರಲಿಪಿಗಾರರ ಸೇವೆಗೆ ಉದ್ಯೋಗದಾತರ ಇ.ಪಿ.ಎಫ್. ವಂತಿಗೆಯನ್ನು ಹೊರತುಪಡಿಸಿ ಒಟ್ಟು ವೇತನ ರೂ.27,650/-ಗಳಾಗಿರುತ್ತದೆ. ನೌಕರರ ಇ.ಪಿ.ಎಫ್. ಮತ್ತು ಶಾಸನ ಬದ್ಧವಾಗಿ ಅನ್ವಯವಾಗುವ ವೃತ್ತಿ ತೆರಿಗೆ, ವಿಮೆ ಮತ್ತು ಆದಾಯ ತೆರಿಗೆ ಅನ್ವಯವಾದಲ್ಲಿ ಅದನ್ನು ಮೇಲ್ಕಂಡ ರೂ.27,650/-ವೇತನದಲ್ಲಿ ನೌಕರರು ಪಾವತಿಸಬೇಕಾಗುತ್ತದೆ.

3) ಏಜೆನ್ಸಿಯವರು ಒದಗಿಸುವ ಮಾನವ ಸಂಪನ್ಮೂಲ ಸೇವೆಗೆ ಸಂಬಂಧಿಸಿದಂತೆ ಶಾಸನ ಬದ್ಧವಾಗಿ ಅನ್ವಯವಾಗುವ ವೃತ್ತಿ ತೆರಿಗೆ / ಆದಾಯ ತೆರಿಗೆ ಗಳನ್ನು ಏಜೆನ್ಸಿಯವರಿಗೆ ನೀಡಲಾಗುವ ಸೇವಾ ಶುಲ್ಕದಲ್ಲಿ ಕಡಿತಗೊಳಿಸಲಾಗುವುದು.

4) ಪ್ರತಿ **ಶೀಘ್ರಲಿಪಿಗಾರರ** ಸೇವೆಯ ವೇತನಕ್ಕೆ ಅನ್ವಯವಾಗುವಂತೆ ಪ್ರತಿ ಸಿಬ್ಬಂದಿಗೆ ಪಾವತಿಸಬೇಕಾದ ಪಿ.ಎಫ್. & ಇ.ಎಸ್.ಐ. ಮೊಬಲಗನ್ನು ಮಾಸಿಕ ಬಿಲ್ಲಿನಲ್ಲಿ ಏಜೆನ್ಸಿಯವರು ವಿವರವಾಗಿ ತಿಳಿಸಬೇಕಾಗುತ್ತದೆ. ಸದರಿ ಇ.ಎಸ್.ಐ. ಮತ್ತು ಪಿ.ಎಫ್. ಮೊತ್ತವನ್ನು ಏಜೆನ್ಸಿಯವರು ನೇಮಿಸಲಾದ ನೌಕರರ ಹೆಸರಿನಲ್ಲಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಿದ್ದಾರೆಯೇ ಎಂಬುದನ್ನು ಈ ಸಂಸ್ಥೆಯು ನೇಮಿಸಿದ ಅಧಿಕಾರಿಯು ಖಾತರಿಪಡಿಸಿದ ನಂತರವೇ ಮುಂದಿನ ತಿಂಗಳ ಮಾಸಿಕ ಬಿಲ್ಲಿನ ಮೊತ್ತವನ್ನು ಪಾವತಿಸಲಾಗುವುದು.

5) ಸರ್ಕಾರದ ನೀತಿ ನಿಯಮಗಳನುಸಾರ ಪ್ರತಿ ತಿಂಗಳು ಇ.ಎಸ್.ಐ. / ಪಿ.ಎಫ್. ನ್ನು ಈ ಕಛೇರಿಗೆ ನೇಮಿಸುವ ಸಿಬ್ಬಂದಿಗಳ ಹೆಸರಿನಲ್ಲಿ ಪಾವತಿಯಾಗಿರುವ ಬಗ್ಗೆ ತಃಖ್ತೆಯೊಂದಿಗೆ ಚಲನ್ ಪ್ರತಿಯನ್ನು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ಮೊತ್ತವನ್ನು ಪಾವತಿ ಮಾಡಿರುವ ಬಗ್ಗೆ ಚಲನ್‌ನ ಪ್ರತಿಯನ್ನು ಈ ಕಛೇರಿಗೆ ನೀಡತಕ್ಕದ್ದು. ಈ ಬಗ್ಗೆ ವಹಿ ಹಾಗೂ ದಾಖಲಾತಿ ನಿರ್ವಹಿಸತಕ್ಕದ್ದು ಇದರ ಮಾಹಿತಿಯನ್ನು ಈ ಸಂಸ್ಥೆಗೆ ಒದಗಿಸಬೇಕು. ಈ ಬಗ್ಗೆ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ಅದಕ್ಕೆ ಏಜೆನ್ಸಿಯವರೇ ಹೊಣೆಗಾರರಾಗಿರುತ್ತಾರೆ. ಮತ್ತು ಒಪ್ಪಂದವನ್ನು ಏಕಪಕ್ಷೀಯವಾಗಿ ಯಾವುದೇ ನೋಟೀಸ್ ನೀಡದೇ ರದ್ದುಗೊಳಿಸಲಾಗುವುದು.

6) ಟೆಂಡರ್‌ದಾರರು, ತಾಂತ್ರಿಕ ಬಿಡ್ ದಾಖಲಾತಿಗಳು ಮತ್ತು ಟೆಂಡರ್ ಪರಿಶೀಲನಾ ಸಮಿತಿಯು ಕೋರುವ ಮೂಲ ದಾಖಲಾತಿಗಳನ್ನು ಟೆಂಡರ್ ಪರಿಶೀಲನಾ ಸಮಿತಿಯು ಸೂಚಿಸಿದ ದಿನಾಂಕದಂದು ಪರಿಶೀಲನೆಗೆ ಹಾಜರುಪಡಿಸುವುದು.

7) ವೃತ್ತಿ ತೆರಿಗೆಯನ್ನು ಈ ಸಂಸ್ಥೆಯಿಂದ ಪಾವತಿಸಲಾಗುವುದಿಲ್ಲ.

8) ದರಪಟ್ಟಿಯಲ್ಲಿ, ಸೇವಾ ಶುಲ್ಕವನ್ನು ಮಾತ್ರ ನಮೂದಿಸತಕ್ಕದ್ದು ಮತ್ತು ಮೇಲ್ಕಂಡ ಎಲ್ಲಾ **ವೃಂದಗಳಿಗೂ ಅನ್ವಯಿಸುವಂತೆ ಒಬ್ಬ ಮಾನವ ಸಂಪನ್ಮೂಲ ವ್ಯಕ್ತಿಯ ಸೇವೆಯನ್ನು ಒದಗಿಸಲು ಮಾಸಿಕ ವಿಧಿಸುವ ಮೊತ್ತವನ್ನು ರೂಪಾಯಿಗಳಲ್ಲಿ ನಮೂದಿಸತಕ್ಕದ್ದು. ಸೇವಾ ಶುಲ್ಕದ ಮೊತ್ತವನ್ನು ಶೇಕಡಾವಾರು ಅಥವಾ ಬೇರೆ ರೀತಿಯಲ್ಲಿ ನಮೂದಿಸಬಾರದು.**

9) ಯಶಸ್ವಿಯಾದ ಟೆಂಡರ್‌ದಾರರು ಕಛೇರಿಯಿಂದ ತಿಳಿವಳಿಕೆ ಪತ್ರ ಮತ್ತು ನಮೂನೆ-Vನ್ನು ಪಡೆದು ಈ ಕಛೇರಿಗೆ ಬೇಕಾದ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರ ಸಂಖ್ಯೆಗೆ ಅನುಗುಣವಾಗಿ ಮಾನವ ಸಂಪನ್ಮೂಲ ಹೊಂದಿರುವ ಬಗ್ಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವ ಬಗ್ಗೆ Form VI ಹಾಜರುಪಡಿಸತಕ್ಕದ್ದು, ಇಲ್ಲವಾದಲ್ಲಿ ಪಾವತಿಸಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್‌ನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

10) ಯಶಸ್ವೀ ಟೆಂಡರ್‌ದಾರರು ಕಾರ್ಯಾದೇಶ ಪಡೆದ 10 ದಿಗಳ ಒಳಗಾಗಿ ಅಗತ್ಯ ಸಂಖ್ಯೆಯ ಅರ್ಹ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಸೇವೆಯನ್ನು ಒದಗಿಸಬೇಕು.

11) ಪ್ರತಿ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಸೇವೆಗೆ ನೀಡಬೇಕಾದ ವೇತನ ಮತ್ತು ಉದ್ಯೋಗದಾತರ ಇ.ಪಿ.ಎಫ್. ಮತ್ತು ಇ.ಎಸ್.ಐ. ವಂತಿಗೆಗಳನ್ನು ಏಜೆನ್ಸಿಯ ಬ್ಯಾಂಕ್ ಖಾತೆಗೆ ಸಂದಾಯ ಮಾಡಲಾಗುವುದು. ಈ ಮೊಬಲಗು ಏಜೆನ್ಸಿಯ ಬ್ಯಾಂಕ್ ಖಾತೆಗೆ ಜಮೆಯಾದ ನಂತರ ಕಛೇರಿ ಕಾರ್ಯನಿರ್ವಹಿಸುವ 02 ದಿನಗಳ ಒಳಗಾಗಿ ಸಿಬ್ಬಂದಿಗೆ ವೇತನವನ್ನು ಮತ್ತು ಸಂಬಂಧಪಟ್ಟ ವಂತಿಗೆಗಳನ್ನು ನೌಕರರ ಇ.ಪಿ.ಎಫ್ ಮತ್ತು ಇ.ಎಸ್.ಐ. ಖಾತೆಗಳಿಗೆ ಜಮಾ ಮಾಡತಕ್ಕದ್ದು.

12) ಪ್ರತಿಯೊಬ್ಬ ಮಾನವ ಸಂಪನ್ಮೂಲ ವ್ಯಕ್ತಿಯು ಯಾವುದಾದರೂ ಬ್ಯಾಂಕಿನಲ್ಲಿ ತಮ್ಮ ಉಳಿತಾಯ ಖಾತೆಗಳನ್ನು ತೆರೆದು ಈ ಉಳಿತಾಯ ಖಾತೆಗಳ ಮಾಹಿತಿಗಳನ್ನು ಏಜೆನ್ಸಿಯವರು ಪಡೆದು ಪ್ರತಿ ತಿಂಗಳು ಪ್ರತಿಯೊಬ್ಬ ಸಿಬ್ಬಂದಿಯ ಸೇವಾ ಮೊಬಗಲಗನ್ನು ಅವರವರ ಖಾತೆಗೆ ಜಮಾ ಮಾಡತಕ್ಕದ್ದು ಮತ್ತು ಜಮಾ ಮಾಡಿದ ವಿವರಗಳನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

13) ಏಜೆನ್ಸಿಯವರಿಗೆ ಪಾವತಿಸುವ ಮಾಸಿಕ ಗುತ್ತಿಗೆ ಮೊಬಲಗಿನಲ್ಲಿ ಚಾಲ್ತಿಯಲ್ಲಿರುವ ದರದಂತೆ ಆದಾಯ ತೆರಿಗೆಯನ್ನು (T D S) ಕಟಾಯಿಸಲಾಗುವುದು.

14) ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.

15) ಏಜೆನ್ಸಿಯು ಒದಗಿಸುವ ಮಾನವ ಸಂಪನ್ಮೂಲ ವ್ಯಕ್ತಿಗೆ ಸಂಬಂಧಿಸಿದಂತೆ, ಇ.ಎಸ್.ಐ., ಪಿ.ಎಫ್. ಆದಾಯ ತೆರಿಗೆ, ಸೇವಾ ತೆರಿಗೆ / ಜಿ.ಎಸ್.ಟಿ. ಹಾಗೂ ಇತರೆ ತೆರಿಗೆಗಳನ್ನು ಸಕಾಲದಲ್ಲಿ ಸಂಬಂಧಿಸಿದ ಇಲಾಖೆಯವರಿಗೆ ಪಾವತಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ವಹಿ ಮತ್ತು ದಾಖಲೆಗಳನ್ನು ನಿರ್ವಹಿಸತಕ್ಕದ್ದು.

17) ಏಜೆನ್ಸಿಯವರು ತಾವು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ಪರಭಾರೆ ಮಾಡತಕ್ಕದ್ದಲ್ಲ.

18) ಕಛೇರಿಯಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಸೂಚನೆಗಳನ್ನು ಏಜೆನ್ಸಿಯವರು ಪಾಲಿಸಬೇಕಾಗಿರುತ್ತದೆ.

19) ಕಛೇರಿಗೆ ನೇಮಿಸಿಕೊಳ್ಳುವ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಕಡಿಮೆಗೊಳಿಸುವ / ಹೆಚ್ಚಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿದ್ದು ಈ ಬಗ್ಗೆ ಈ ಕಛೇರಿಯ ಸೂಚನೆಗೆ ಏಜೆನ್ಸಿಯು ಬದ್ದರಾಗಿರತಕ್ಕದ್ದು.

20) ಏಜೆನ್ಸಿಯವರು ಒದಗಿಸುವ ಮಾನವ ಸಂಪನ್ಮೂಲ ವ್ಯಕ್ತಿಯ ಜನ್ಮ ದಿನಾಂಕ ಕುರಿತಂತೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿಗಳು ಹಾಗೂ ಆಧಾರ್ ಕಾರ್ಡ್‌ನ ಪ್ರತಿ ಮತ್ತು 01 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒದಗಿಸತಕ್ಕದ್ದು.

21) ಏಜೆನ್ಸಿಯವರು ಒದಗಿಸುವ ಶೀಘ್ರಲಿಪಿಗಾರ ವ್ಯಕ್ತಿಗಳು ಈ ಸಂಸ್ಥೆಯ ಹಿರಿಯ ಅಧಿಕಾರಿಗಳ ವ್ಯಾಪ್ತಿಯಲ್ಲಿ ಹಾಗೂ ಅವರುಗಳ ಮಾರ್ಗದರ್ಶನದಂತೆ ಸೇವೆ ಸಲ್ಲಿಸಬೇಕು.

22) ಏಜೆನ್ಸಿಯವರು ಒದಗಿಸುವ ಶೀಘ್ರಲಿಪಿಗಾರರು ಅವರು ಕಾರ್ಯನಿರ್ವಹಿಸುವ ಅವಧಿಯಲ್ಲಿ ಈ ಸಂಸ್ಥೆಗೆ ಉಂಟು ಮಾಡುವ ಯಾವುದೇ ನಷ್ಟಕ್ಕೆ ಟೆಂಡರ್‌ದಾರರು ಮತ್ತು ಸಿಬ್ಬಂದಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಜವಾಬ್ದಾರರಾಗಿರುತ್ತಾರೆ.

23) ಏಜೆನ್ಸಿಯವರು ಒದಗಿಸುವ ಶೀಘ್ರಲಿಪಿಗಾರ ವ್ಯಕ್ತಿಗಳು ಕಾರ್ಯನಿರ್ವಹಿಸುವ ಅವಧಿಯಲ್ಲಿ ಯಾವುದೇ ಆಕಸ್ಮಿಕ ಅಪಘಾತಕ್ಕೊಳಗಾದಲ್ಲಿ ಅಥವಾ ಮರಣ ಹೊಂದಿದಲ್ಲಿ ಟೆಂಡರ್‌ದಾರರೇ ಪರಿಹಾರವನ್ನು ಒದಗಿಸಬೇಕಾಗುತ್ತದೆ. ಈ ವಿಷಯದಲ್ಲಿ ಈ ಸಂಸ್ಥೆಯ ಜವಾಬ್ದಾರಿ ಏನೂ ಇರುವುದಿಲ್ಲ.

24) ಏಜೆನ್ಸಿಯವರು ಒದಗಿಸುವ ಶೀಘ್ರಲಿಪಿಗಾರ ವ್ಯಕ್ತಿಗಳು ಅವಧಿಯ ಮಧ್ಯದಲ್ಲಿ ಕೆಲಸ ಬಿಟ್ಟು ಹೋದಲ್ಲಿ ಅಥವಾ ಒದಗಿಸಿದ ನೌಕರರನ್ನು ಅನರ್ಹರೆಂದು ಹಿಂದಿರುಗಿಸಿದಲ್ಲಿ ಟೆಂಡರ್‌ದಾರರು ಒಂದು ವಾರದ ಒಳಗಾಗಿ ಬದಲೀ ನೌಕರರನ್ನು ಒದಗಿಸಬೇಕಾಗುತ್ತದೆ.

25) ಏಜೆನ್ಸಿಯವರು ಮತ್ತು ಏಜೆನ್ಸಿಯವರು ಒದಗಿಸುವ ನೌಕರರು ಈ ಸಂಸ್ಥೆಯ ಗೌಪ್ಯತೆಯನ್ನು ಕಾಪಾಡಬೇಕಾಗುತ್ತದೆ.

26) ಏಜೆನ್ಸಿಯವರು ಒದಗಿಸುವ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ವ್ಯಕ್ತಿಗೆ ಗುರುತಿನ ಚೀಟಿಯನ್ನು ಸಂಬಂಧಪಟ್ಟ ಟೆಂಡರುದಾರರೇ ಒದಗಿಸಬೇಕು. ಕರ್ತವ್ಯದ ಸ್ಥಳದಲ್ಲಿ ಅವುಗಳನ್ನು ಕಡ್ಡಾಯವಾಗಿ ಧರಿಸಲು ಅವರಿಗೆ ಸೂಚಿಸಬೇಕು.

27) ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಉದ್ಭವವಾಗುವ ಯಾವುದೇ ವ್ಯಾಜ್ಯಗಳು ಬೆಂಗಳೂರಿನ ನ್ಯಾಯಾಲಯಗಳ ಪರಿಮಿತಿಗೆ ಒಳಪಡುತ್ತವೆ.

28) ಮೇಲಿನ ಯಾವುದೇ ಷರತ್ತು-ವ-ನಿಬಂಧನೆಗಳನ್ನು ಪಾಲಿಸಲು ಏಜೆನ್ಸಿ ವಿಫಲವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಏಜೆನ್ಸಿಯು ಪಾವತಿಸಿರುವ ಇ.ಎಂ.ಡಿ. ₹25,000/-ಗಳನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್‌ನ್ನು ರದ್ದುಪಡಿಸುವ ಅಧಿಕಾರವನ್ನು ಈ ಕಛೇರಿಯು ಹೊಂದಿರುತ್ತದೆ.

29) ಏಜೆನ್ಸಿರವರು ಹಿಂದಿನ ಮೂರು ವರ್ಷಗಳಲ್ಲಿ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಿರುವ ಕುರಿತಂತೆ ಪಿ.ಎಫ್., ಇ.ಎಸ್.ಐ., ಸೇವಾ ತೆರಿಗೆ / ಜಿ.ಎಸ್.ಟಿ. ಹಾಗೂ ಇತರೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಪಾವತಿ ಮಾಡಿರುವ ದಾಖಲೆಗಳನ್ನು ಸಲ್ಲಿಸಬೇಕು.

30) ಏಜೆನ್ಸಿಯವರು ಒದಗಿಸುವ ಮಾನವ ಸಂಪನ್ಮೂಲ ವ್ಯಕ್ತಿಯು ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಪ್ರತಿ ದಿನ ಕಛೇರಿ ಸಮಯದಲ್ಲಿ ಕಾರ್ಯನಿರ್ವಹಿಸಬೇಕು.

31) ಏಜೆನ್ಸಿಯವರು ಸರಬರಾಜು ಮಾಡುವ ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ವ್ಯಕ್ತಿ, ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ಅವರ ಹಿಂದಿನ ಅನುಭವ ಇವುಗಳ ಮಾಹಿತಿಯನ್ನು ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಲಿಖಿತ ಮೂಲಕ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳಬೇಕು. ಅವರ ಪರಿಣತಿ, ಹಿಂದಿನ ಅನುಭವದ ಜೊತೆಗೆ, ಈ ಸಂಸ್ಥೆಯಲ್ಲಿ ಈ ಹಿಂದೆ ಕೆಲಸ ಮಾಡಿದ ಅನುಭವವಿದ್ದಲ್ಲಿ ಅವುಗಳನ್ನು ವಿಶೇಷವಾಗಿ ಪರಿಗಣಿಸಿ ಮಾನವ ಸಂಪನ್ಮೂಲ ವ್ಯಕ್ತಿಯ ಸೇವೆಯನ್ನು ಪಡೆದುಕೊಳ್ಳಲಾಗುವುದು. ಈ ಬಗ್ಗೆ ನಿಬಂಧಕರು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ.

32) ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳು / ನಿಬಂಧನೆಗಳನ್ನು ಒಪ್ಪಿರುವುದಾಗಿ ಯಶಸ್ವಿ ಟೆಂಡರ್‌ದಾರರು ಕಛೇರಿಗೆ ಕರಾರು ಮಾಡಿಕೊಡಬೇಕಾಗಿರುತ್ತದೆ.

# ಭಾಗ-2

# ಅನುಬಂಧ-5

## ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆ ಒದಗಿಸುವ ಗುತ್ತಿಗೆದಾರರುಗಳು ಇ ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಟೆಂಡರ್ ಸಲ್ಲಿಸಲು ಪಾಲಿಸಬೇಕಾದ ನಿಯಮಗಳು ಹಾಗೂ ವಿಧಾನಗಳ ಬಗ್ಗೆ ಅಪ್‌ಲೋಡ್ ಮಾಡಲೇಬೇಕಾದ ದಾಖಲೆಗಳು

1) ಏಜೆನ್ಸಿಯವರು ತಮ್ಮ ಸೇವಾ ಶುಲ್ಕದ ದರಗಳನ್ನು ಪ್ರತಿ ನೌಕರರ ಸೇವೆ ಒದಗಿಸಲು ವಿಧಿಸುವ ಮೊತ್ತವನ್ನು ರೂಪಾಯಿಗಳಲ್ಲಿ ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಸಲ್ಲಿಸಬೇಕಾಗುತ್ತದೆ. ನಮೂದಿಸುವ ಮಾಹೆಯಾನ ದರಗಳನ್ನು **ಅನುಬಂಧ-7**ರ ಟೆಂಡರ್ ದರಗಳ ಆರ್ಥಿಕ ಬಿಡ್ ಷೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು. ಸೇವಾ ಶುಲ್ಕವನ್ನು ಶೇಕಡಾವಾರು ಅಥವಾ ಬೇರೆ ರೀತಿಯಲ್ಲಿ ನಮೂದಿಸಬಾರದು.

2) ಇ.ಎಂ.ಡಿ ಮತ್ತು ಟೆಂಡರ್ ಪ್ರೋಸೀಜರ್ ಶುಲ್ಕವನ್ನು ನಿಯಮಾನುಸಾರ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಪಾವತಿಸತಕ್ಕದ್ದು. ಟೆಂಡರ್ ಪ್ರಕಟಣೆ ಮತ್ತು ಷರತ್ತುಗಳ ಬಗ್ಗೆ ಪೂರ್ಣವಾಗಿ ತಿಳಿದುಕೊಳ್ಳತಕ್ಕದ್ದು.

3) ಗ್ರೂಪ್-ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆಗೆ ಸಂಬಂಧಿಸಿದಂತೆ ಇಎಂಡಿ ₹25,000/-ಗಳನ್ನು ಇ-ಪ್ರೊಕ್ಯೂರ್ ಮೆಂಟ್‌ನಲ್ಲಿ ತಿಳಿಸಿರುವ ವಿಧಾನಗಳ ಮೂಲಕ ಅಥವಾ ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿರುವಂತೆ ಚಲನ್ ಪ್ರತಿಯನ್ನು ಪ್ರಿಂಟ್ ತೆಗೆದು ಬ್ಯಾಂಕ್‌ನಲ್ಲಿ ಪಾವತಿಸಿ ಚಲನ್ ಪ್ರತಿಯನ್ನು ಅಪ್‌ಲೋಡ್ ಮಾಡಬೇಕು. ಯಶಸ್ವಿಯಾದ ಗುತ್ತಿಗೆದಾರರನ್ನು ಹೊರತುಪಡಿಸಿ ಉಳಿದ ಗುತ್ತಿಗೆದಾರರ ಇ.ಎಂ.ಡಿ. ಮೊತ್ತವನ್ನು ನಿಯಮಾನುಸಾರ ಸಂಬಂಧಪಟ್ಟವರಿಗೆ ಪಾವತಿ ಮಾಡಲಾಗುವುದು.

## ಏಜೆನ್ಸಿಯವರು ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವ ದಿನಾಂಕ ಮತ್ತು ಸಮಯದೊಳಗೆ ಈ ಕೆಳಕಂಡ ದಾಖಲಾತಿಗಳನ್ನು ಹಾಗೂ ದರಗಳನ್ನು ನಮೂದಿಸಿ ಇ ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಟೆಂಡರ್ ಸಲ್ಲಿಸತಕ್ಕದ್ದು.

1) ಟೆಂಡರ್‌ಗಳನ್ನು ದ್ವಿ ಟೆಂಡರ್ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟರ್ ನ ಮೂಲಕ ಸಲ್ಲಿಸಬೇಕು.

2) ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಲಾಗುವ ಎಲ್ಲಾ ನೋಂದಣಿ ಪ್ರಮಾಣ ಪತ್ರಗಳನ್ನು ಟೆಂಡರ್ ಆಹ್ವಾನಿಸುವ ದಿನಾಂಕಕ್ಕೆ ಮುಂಚಿತವಾಗಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರತಕ್ಕದ್ದು. ಟೆಂಡರ್ ಆಹ್ವಾನಿಸಿದ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮಾನ್ಯ ಮಾಡಲಾಗುವುದಿಲ್ಲ.

3) ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ ಪರಿಶೀಲನೆಗೆ ಅವಶ್ಯವಿದ್ದಲ್ಲಿ ಸದರಿ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.

4) ಆರ್ಥಿಕ ಬಿಡ್‌ನಲ್ಲಿ ಟೆಂಡರ್‌ದಾರರು ತಾವು ಸೇವೆ ಒದಗಿಸುವ ಒಬ್ಬ ಮಾನವ ಸಂಪನ್ಮೂಲ ವ್ಯಕ್ತಿಗೆ ಮಾಸಿಕ ಸೇವಾ ಶುಲ್ಕವನ್ನು ರೂಪಾಯಿಗಳಲ್ಲಿ-ಅಂಕಿ ಹಾಗೂ ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

5) ತಾಂತ್ರಿಕ ಬಿಡ್ ಅನ್ನು **ಅನುಬಂಧ-1ರಲ್ಲಿನ** ಮಾದರಿಯಲ್ಲಿ ಸಲ್ಲಿಸಬೇಕು. ಟೆಂಡರ್‌ದಾರರು ತಾಂತ್ರಿಕ ಬಿಡ್ ನಮೂನೆಯಲ್ಲಿ ಹೇಳಿರುವ ಕೆಳಕಂಡ ಮಾಹಿತಿಯನ್ನು **ಭರ್ತಿ ಮಾಡಿ ಸಹಿಮಾಡಿ ನೋಟರಿ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ದಾಖಲೆಗಳ ಪ್ರತಿಗಳನ್ನು** ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು. ಅಪೂರ್ಣ ನಮೂನೆ ಹಾಗೂ ಅಪೂರ್ಣ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

6) Shops and Commercial Establishment Act ಅನ್ವಯ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಲುವಾಗಿ ಪಡೆದ ಚಾಲ್ತಿಯಲ್ಲಿರುವ ನೋಂದಣಿ / ಪರವಾನಗಿ ಪ್ರಮಾಣ ಪತ್ರವನ್ನು ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು.

7) ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿ ನೋಂದಣಿ ಮಾಡಿರುವ ಚಾಲ್ತಿಯಲ್ಲಿರುವ ನೋಂದಣಿ ಪ್ರಮಾಣ ಪತ್ರವನ್ನು (ಇ.ಎಸ್.ಐ. ನೋಂದಣಿ ಪತ್ರ) ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿಸಲ್ಲಿಸತಕ್ಕದ್ದು.

8) ಭವಿಷ್ಯ ನಿಧಿ ಇಲಾಖೆಯಲ್ಲಿ ನೋಂದಣಿ ಮಾಡಿರುವ ಚಾಲ್ತಿಯಲ್ಲಿರುವ ನೋಂದಣಿ ಪ್ರಮಾಣ ಪತ್ರವನ್ನು (ಪಿ.ಎಫ್. ನೊಂದಣಿ ಪತ್ರ) ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು.

9) ಸಂಬಂಧಪಟ್ಟ ಇಲಾಖೆಯಲ್ಲಿ ನೋಂದಣಿ ಮಾಡಿರುವ ಚಾಲ್ತಿಯಲ್ಲಿರುವ ಸೇವಾ ತೆರಿಗೆ (ಸರ್ವೀಸ್ ಟ್ಯಾಕ್ಸ್)/ಜಿ.ಎಸ್.ಟಿ. ನೊಂದಣಿ ಪತ್ರ ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿಸಲ್ಲಿಸತಕ್ಕದ್ದು.

10) ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃತ್ತಿ ತೆರಿಗೆ ಬಗ್ಗೆ ಚಾಲ್ತಿಯಲ್ಲಿರುವ ನೋಂದಣಿ ಪತ್ರ ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿಸಲ್ಲಿಸತಕ್ಕದ್ದು.

11) ಆದಾಯ ತೆರಿಗೆ ಇಲಾಖೆಯಿಂದ ಪಡೆದಿರುವ ಟ್ಯಾನ್ ಕಾರ್ಡ್ / ಪಾನ್ ಕಾರ್ಡ್ ಪ್ರತಿಯನ್ನು ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು.

12) ಕಳೆದ 03 ವರ್ಷಗಳಲ್ಲಿ ವಿವಿಧ ಸಂಸ್ಥೆಗಳಿಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಿರುವ ಬಗ್ಗೆ ಅನುಭವ ಪ್ರಮಾಣ ಪತ್ರದ ಪ್ರತಿಗಳನ್ನು ಇ-ತಂತ್ರಾಂಶದಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು.

13) ಕಳೆದ 03 ವರ್ಷಗಳಿಂದ ಈ ಕೆಳಕಂಡಂತೆ ಪಾವತಿಗೆ ಸಂಬಂಧಪಟ್ಟ ಚಲನ್ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು

1. **ಸೇವಾ ತೆರಿಗೆ / ಜಿ.ಎಸ್.ಟಿ. ಪಾವತಿ,**
2. **ಭವಿಷ್ಯ ನಿಧಿ,**
3. **ಕಾರ್ಮಿಕ ವಿಮೆ,**
4. **ಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸ್**

ಸೂಚನೆ :- 1) ಮೇಲ್ಕಂಡಂತೆ ಇ-ಪ್ರೊಕ್ಯೂರ್‌ಮೆಂಟ್ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾದ ದಾಖಲೆಗಳು ಸಮರ್ಪಕವಾಗಿದ್ದಲ್ಲಿ ಮತ್ತು ಇ.ಎಂ.ಡಿ ₹25,000/-ಗಳನ್ನು ಪಾವತಿಸಿದ್ದಲ್ಲಿ ಮಾತ್ರ ಟೆಂಡರ್‌ನ್ನು ಪರಿಗಣಿಸಲಾಗುವುದು. ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

2) ಯಾವುದೇ ಕಾರಣವನ್ನು ನೀಡದೆ ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದೇ ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.

## ಭಾಗ-2

## ಅನುಬಂಧ-6

### ಟೆಂಡರ್ ತೆರೆಯುವುದು ಮತ್ತು ಟೆಂಡರ್‌ಗಳ ಮೌಲ್ಯಮಾಪನ

1) ಇ-ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿದ ದಿನಾಂಕದಂದು ಟೆಂಡರ್ ಅಂಗೀಕರಿಸುವ ಅಧಿಕಾರಿಯಾದ **ಉಪ ನಿಬಂಧಕರು (ಆಡಳಿತ-1), ಕರ್ನಾಟಕ ಲೋಕಾಯುಕ್ತ, ಬೆಂಗಳೂರು** ಇವರ ಕಚೇರಿಯಲ್ಲಿ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕವು ಯಾವುದಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮಾರನೆಯ ಕೆಲಸದ ದಿನ ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ತೆರೆಯಲಾಗುವುದು.

2) ಟೆಂಡರ್ ತಾಂತ್ರಿಕ ಬಿಡ್ ತೆರೆಯಲು ನಿಗದಿಪಡಿಸಿದ ದಿನಾಂಕದಂದು ತಾಂತ್ರಿಕ ಬಿಡ್ ತೆರೆಯಲಾವುದು.

3) ತಾಂತ್ರಿಕ ಬಿಡ್‌ನ ಟೆಂಡರ್‌ಗಳನ್ನು ತೆರೆದು ಟೆಂಡರ್‌ದಾರರು ಒದಗಿಸುವ ದಾಖಲೆಗಳನ್ನು ಟೆಂಡರ್ ಪರಿಶೀಲನಾ ಸಮಿತಿಯು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.

4) ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಟೆಂಡರ್‌ಗಳನ್ನು ಮಾತ್ರ ಒಪ್ಪಿಕೊಂಡು, ಅವುಗಳಿಗೆ ಸಂಬಂಧಿಸಿದ ಆರ್ಥಿಕ ಬಿಡ್‌ಗಳನ್ನು ಮಾತ್ರ ನಿಗದಿಪಡಿಸಿದ ದಿನಾಂಕದಂದು ತೆರೆಯಲಾಗುವುದು.

## ಭಾಗ–2

## ಅನುಬಂಧ–7

## ಆರ್ಥಿಕ ಬಿಡ್‌ನ ನಮೂನೆ

ಕರ್ನಾಟಕ ಲೋಕಾಯುಕ್ತ ಪ್ರಧಾನ ಕಛೇರಿ, ಬೆಂಗಳೂರಿನ ದಿನನಿತ್ಯದ ಕೆಲಸ ಕಾರ್ಯಗಳಿಗೆ **ಗ್ರೂಪ್–ಸಿ ವೃಂದದ ಶೀಘ್ರಲಿಪಿಗಾರರು,** ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಕುರಿತು ಸೇವಾ ಶುಲ್ಕದ ದರದ ಟೆಂಡರ್.

**ಟೆಂಡರ್ ದರ ಮಾಹೆಯಾನ**

| | |
|---|---|
| ಏಜೆನ್ಸಿಯು, ಮೇಲ್ಕಂಡ ಎಲ್ಲಾ ವೃಂದಗಳಿಗೆ ಸೇರಿದಂತೆ ಮಾನವ ಸಂಪನ್ಮೂಲ ಸೇವೆಗೆ ಒಬ್ಬ ವ್ಯಕ್ತಿಗೆ ನಮೂದಿಸಬೇಕಾದ ಮಾಸಿಕ ಸೇವಾ ಶುಲ್ಕ ದರ – ರೂಪಾಯಿಗಳಲ್ಲಿ (ಶೇಕಡಾವಾರು ಅಥವಾ ಬೇರೆ ರೀತಿಯಲ್ಲಿ ಶುಲ್ಕದ ಮೊತ್ತವನ್ನು ನಮೂದಿಸಬಾರದು) | ಅಂಕಿಗಳಲ್ಲಿ. . . . .<br><br>ಅಕ್ಷರಗಳಲ್ಲಿ. . . . . |

ಮೇಲ್ಕಂಡ ಸೇವಾ ಶುಲ್ಕದ ದರಕ್ಕೆ ಗ್ರೂಪ್–ಸಿ ವೃಂದದ ಶೀಘ್ರಲಿಪಿಗಾರರು ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಬದ್ಧರಾಗಿರುತ್ತೇನೆ.

ದಿನಾಂಕ :

ಸ್ಥಳ : (ಏಜೆನ್ಸಿಯ ಮಾಲೀಕರ ಮೊಹರು ಹಾಗೂ ಸಹಿ)

(ಟಿಪ್ಪಣಿ: ಬಿಡ್‌ನಲ್ಲಿ ಹೇಳಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಡ್ದುದಾರರು ನಮೂದಿಸಿರುವ ಸೇವಾಶುಲ್ಕವನ್ನು ಪರಿಗಣಿಸಿ ಹಾಗೂ ಏಜೆನ್ಸಿದಾರರ ಹಿನ್ನಲೆಯನ್ನು ವಿಚಾರಿಸಿ ಸೂಕ್ತವೆಂದು ಕಂಡುಬಂದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಲಾಗುವುದು.)